ಸಂಘದ ಹಿಂದಿನ ಆಡಳಿತ ಮಂಡಳಿಯ ಸದಸ್ಯರು ಹೊಣೆಗಾರರಾಗಿರುತ್ತಾರೆ. ಕೂಲಂಕುಷ ಪರಿಶೀಲನೆ ನಂತರ ಕಾನೂನು ಪ್ರಕಾರ ಕ್ರಮವನ್ನು ಜರುಗಿಸಲಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಲಿಕ್ವಿಡೇಶನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದ ಮೇಲೆ ಒಬ್ಬರು ಅಧ್ಯಕ್ಷರು ಸೃಷ್ಟಿಯಾಗುತ್ತಾರೆ. ಷೋ ರೂಂ ಕಟ್ಟಿಕೊಳ್ಳುತ್ತಾರೆ. ಬಾಡಿಗೆ ಕೊಡುತ್ತಾರೆಂದರೆ ರಿಜಿಸ್ಟ್ರಾರ್ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಏನಾಗಿದೆ ಸಾರ್? ಅವರೇ ಹೇಳಿಬಿಡುತ್ತಾರೆ, ಲಿಕ್ವಿಡೇಶನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದ್ದೇವೆ. ಸಹಕಾರ ಸಂಘ ಇಲ್ಲ ಎಂದು ಅಲ್ಲೊಬ್ಬರು ಅಧ್ಯಕ್ಷರಾಗಿಬಿಟ್ಟಿದ್ದಾರಂತೆ, ಅವರು ಒಂದು ದೊಡ್ಡ ಷೋರೂಂ ಬಿಲ್ಡಿಂಗ್ ಕಟ್ಟಿಕೊಳ್ಳುತ್ತಿದ್ದಾರಂತೆ, ಅವರು ಷೋರೂಂ ಸ್ಟಾರ್ಟ್ ಮಾಡುತ್ತಿದ್ದಾರಂತೆ. ಏನ್ ಸಾರ್, ಈ ರಾಜ್ಯದ ಕಥೆ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವ ಉತ್ತರ ನನಗೆ ಸ್ಯಾಟಿಸ್‌ಫ್ಯಾಕ್ಷನ್ ಆಗಿದೆ. Very good answer. But what is suitable action against that fellow? Have you arrested him? Have you seized that building? ಅದರ ಬಗ್ಗೆ ತಾವು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಿ. ನಾನು I brought to your notice ತಮ್ಮ ನೋಟೀಸ್ ಕಳುಹಿಸಿದ ಮೇಲೆ ಈ ರೀತಿಯ ಉತ್ತರ ಬರುತ್ತದೆಂದರೆ, ಆ ಅಧಿಕಾರಿಗಳಾದ ಮುನಿಸಿಪಲ್ ಕಮಿಶನರ್ ಪ್ಲಾನ್ ಸ್ಯಾಂಕ್ಷನ್ ಮಾಡುವವನು, ಆ ಸಬ್ ರಿಜಿಸ್ಟ್ರಾರ್ ಏನು ಮಾಡಿಕೊಂಡಿದ್ದರು? ಆ ಕೋ-ಆಪರೇಟಿವ್ ರಿಜಿಸ್ಟ್ರಾರ್ ಏನು ಮಾಡಿಕೊಂಡಿದ್ದರು? ಅವರ ಮೇಲೂ ನೀವು ಕ್ರಮ ತೆಗೆದುಕೊಳ್ಳಬೇಕು. ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಒಂದು ಮಾತನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನನ್ನ ಗಮನವನ್ನು ಏನು ಸೆಳೆದಿದ್ದಾರೆ ಆ ಬಗ್ಗೆ ನಾನು ಆದಷ್ಟು ತಕ್ಷಣ ಇದರ ಬಗ್ಗೆ ಅವರು ಬಿಲ್ಡಿಂಗ್ ಕಟ್ಟಿರಬಹುದು ಮತ್ತು ಇಲಾಖೆಯಲ್ಲಿ ಯಾರಾದರೂ ತಪ್ಪು ಮಾಡಿರತಕ್ಕಂಥ ಅಧಿಕಾರಿಗಳೇ ಇರಬಹುದು. ಅವರ ಮೇಲೆ ಕಾನೂನಿನ ಅಡಿಯಲ್ಲಿ ನಾನು ಸೂಕ್ತ ಕ್ರಮವನ್ನು ಕಾಲ ವಿಳಂಬ ಮಾಡದೇ ತೆಗೆದುಕೊಳ್ಳುತ್ತೇನೆ.

(ಊ) ವಿಷಯ: ಮಹಿಳೆಯರು ಆಸಿಡ್ ದಾಳಿ ಹಾಗೂ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಬಗ್ಗೆ.

ಶ್ರೀಮತಿ ಟಿ. ಭಾಗೀರಥಿ (ಕೊಟ್ಟೂರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯದಲ್ಲಿ ಮಹಿಳೆಯರು ಆ್ಯಸಿಡ್ ದಾಳಿ ಹಾಗೂ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಹಿಳೆಯರ ಮೇಲೆ ಆಸಿಡ್ ಎರಚುವ ಪ್ರಕರಣಗಳಿಗೆ ಸಂಬಂಧಿಸಿದಂತೆ, 2001 ರಲ್ಲಿ

15 ಪ್ರಕರಣಗಳು, 2002 ರಲ್ಲಿ 11 ಪ್ರಕರಣಗಳು, 2003ರಲ್ಲಿ 14 ಪ್ರಕರಣಗಳು, 2004ರಲ್ಲಿ 12 ಪ್ರಕರಣಗಳು, 2005ರಲ್ಲಿ 5 ಪ್ರಕರಣಗಳು ಮತ್ತು 2006 ರಲ್ಲಿ ಇಲ್ಲಿಯವರೆಗೆ 1 ಪ್ರಕರಣ ವರದಿಯಾಗಿರುತ್ತವೆ.

ಮಹಿಳೆಯರ ಮೇಲೆ ಆಸಿಡ್ ಎರಚುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಆರೋಪಿತರ ವಿರುದ್ಧ ವಿಳಂಬವಿಲ್ಲದೆ ಕಾನೂನು ಕ್ರಮ ಜರುಗಿಸುವ ಕುರಿತು ಎಲ್ಲಾ ಘಟಕಾಧಿಕಾರಿಗಳಿಗೆ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

1. ಇಂತಹ ಪ್ರಕರಣಗಳನ್ನು ಪೊಲೀಸ್ ಮ್ಯಾನ್ಯೂಯಲ್ ಆದೇಶ ಸಂಖ್ಯೆ : 1585 (5)ರ ಅನ್ವಯ ವಿಶೇಷ ಗಂಭೀರ ಪ್ರಕರಣಗಳೆಂದು ಪರಿಗಣಿಸಬೇಕು.
2. ಈ ಪ್ರಕರಣಗಳ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಗಳಿಂದ ತನಿಖೆ ನಡೆಸಬೇಕು.
3. ಈ ಪ್ರಕರಣಗಳನ್ನು ದಾಖಲಿಸಿಕೊಳ್ಳುವಾಗ ಭಾರತ ದಂಡ ಸಂಹಿತೆಯ ಕಲಂ 320, 326 ಹಾಗೂ 307 ನ್ನು ಅಳವಡಿಸಿಕೊಳ್ಳುವುದನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು.
4. ಅಪರಾಧಕ್ಕೆ ಬಳಸಿದ ವಸ್ತುಗಳನ್ನು ಅಂದರೆ ಬಳಸಿದ ಆಸಿಡ್, ಆಸಿಡ್ ಎರೆಚಲು ಉಪಯೋಗಿಸಿದ ಪಾತ್ರೆ ಅದನ್ನು ಸಂಗ್ರಹಿಸಲು ಉಪಯೋಗಿಸಿದ ಸೀಸೆ, ಆಸಿಡ್‌ಯುಕ್ತ ಮಣ್ಣುಗಳನ್ನು ವಶಪಡಿಸಿಕೊಂಡು, ತಕ್ಷಣವೇ ರಾಸಾಯನಿಕ ಪರೀಕ್ಷೆಗೆ ಕಳುಹಿಸಬೇಕು.
5. ನೊಂದ ವ್ಯಕ್ತಿಯನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸೇರಿಸಿ ಪ್ರಥಮ ಚಿಕಿತ್ಸೆಯನ್ನು ಒದಗಿಸುವುದು. ಆ ಮಹಿಳೆಯ ಬಟ್ಟೆಯನ್ನು ಸಂಗ್ರಹಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಬೇಕು.
6. ಅಪರಾಧಿಯನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಬೇಕು ಮತ್ತು ಆಸಿಡ್‌ನ್ನು ಪಡೆದ ಮೂಲವನ್ನು ತಿಳಿಯಬೇಕು.
7. ಅಪರಾಧಕ್ಕೆ ಕಾರಣವನ್ನು ಕಂಡುಹಿಡಿಯಬೇಕು.
8. ನೊಂದ ವ್ಯಕ್ತಿಯನ್ನು ಅನುಕಂಪದಿಂದ ನಡೆಸಿಕೊಳ್ಳಬೇಕು. ನೊಂದ ವ್ಯಕ್ತಿಗೆ ಅಥವಾ ಅವರ ಕುಟುಂಬದವರಿಗೆ ಉಂಟಾದ ಹಾನಿಯ ಕುರಿತು ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ತಿಳುವಳಿಕೆ ನೀಡಬೇಕು ಹಾಗೂ ಪರಿಹಾರ ಪಡೆಯಲು ಎಲ್ಲಾ ವಿಧವಾದ ಸಹಕಾರವನ್ನು ನೀಡಬೇಕು.
9. ಸಾಮಾನ್ಯವಾಗಿ ಭಗ್ನ ಪ್ರೇಮ, ಏಕಮುಖ ಪ್ರೇಮ ಮುಂತಾದ ವಿಷಯಗಳಲ್ಲಿ ಬೆದರಿಕೆ ಹಾಕಿದ ಪ್ರಕರಣಗಳ ಬಗ್ಗೆ ಠಾಣೆಗಳಲ್ಲಿ ದೂರುಗಳು ಬಂದಾಗ ಠಾಣಾ ಪ್ರಭಾರ ಅಧಿಕಾರಿಯು ಅಸಂಜ್ಞೇಯ ಪ್ರಕರಣವನ್ನು ದಾಖಲಿಸಿ,

ಅವಶ್ಯಕತೆ ಕಂಡುಬಂದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದು, ಕಾನೂನಿನ್ವಯ ಕ್ರಮ ಕೈಗೊಳ್ಳಬೇಕು ಹಾಗೂ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಈ ಪ್ರಕರಣಗಳಲ್ಲಿ ಒಳಗಾಗುವ ಹೆಣ್ಣು ಮಕ್ಕಳಿಗೆ ಮುಂದಿನ ದಿನಗಳಲ್ಲಿ ಸರ್ಕಾರದಿಂದ ಒಂದು ವಿಶೇಷವಾದ ನೆರವನ್ನು ಕೊಡಲು ಸರ್ಕಾರ ಮುಂದಾಗುತ್ತದೆ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀಮತಿ ಟಿ. ಭಾಗೀರಥಿ : ಮಾನ್ಯ ಅಧ್ಯಕ್ಷರೆ, ನಾನು ಈ ಉತ್ತರವನ್ನು ಅತ್ಯಂತ ಮನನೊಂದು ಸ್ವೀಕರಿಸುತ್ತೇನೆ ಎಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ. ಉತ್ತರದಲ್ಲಿ ಪಾಯಿಂಟ್ ನಂಬರ್ 1ರಲ್ಲಿ ನಡೆಸಬೇಕು, ಪರಿಗಣಿಸಬೇಕು, ಕಳುಹಿಸಬೇಕು, ತಿಳಿಯಬೇಕು, ನೋಡಬೇಕು ಎನ್ನುವ ಉತ್ತರವನ್ನು ಕೊಟ್ಟರೆ, ಇವುಗಳನ್ನು ಯಾರು ಮಾಡಬೇಕು ಎನ್ನುವುದೇ ನನ್ನ ಪ್ರಶ್ನೆ. ಎರಡನೆಯದಾಗಿ, ಇತ್ತೀಚೆಗೆ ದೌರ್ಜನ್ಯಕ್ಕೆ ಮಹಿಳೆಯರ ಜೊತೆಗೆ ಮಕ್ಕಳೂ ಕೂಡ ಒಳಗಾಗಿರುವುದನ್ನು ನಾವು ನೋಡುತ್ತಿದ್ದೇವೆ. ಈ ದೌರ್ಜನ್ಯ ಎನ್ನುವ ಪದಕ್ಕೆ ಮುಕ್ತಿ ಯಾವಾಗ ಎಂದು ನನಗೆ ಗೊತ್ತಾಗಬೇಕಾಗಿದೆ. ಏಕೆಂದರೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ವಿಶೇಷವಾಗಿ ಆ್ಯಸಿಡ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಮಾತನಾಡುವುದೇನೆಂದರೆ, ಪಾಯಿಂಟ್ ನಂಬರ್ 8ರಲ್ಲಿ "ನೊಂದ ವ್ಯಕ್ತಿಯನ್ನು ಅನುಕಂಪದಿಂದ ನಡೆಸಿಕೊಳ್ಳಬೇಕು. ನೊಂದ ವ್ಯಕ್ತಿಗೆ ಅಥವಾ ಅವರ ಕುಟುಂಬದವರಿಗೆ ಉಂಟಾದ ಹಾನಿಯ ಕುರಿತು ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ತಿಳುವಳಿಕೆ ನೀಡಬೇಕು ಹಾಗೂ ಪರಿಹಾರ ಪಡೆಯಲು ಎಲ್ಲಾ ವಿಧವಾದ ಸಹಕಾರವನ್ನು ನೀಡಬೇಕು" ಎನ್ನಲಾಗಿದೆ. ನಾವು ಇಷ್ಟೆಲ್ಲಾ ಮಾಡುವ ಹೊತ್ತಿಗೆ ನಾನು ಭಾವನೆ ಮಾಡುತ್ತೇನೆ ಆ ಆ್ಯಸಿಡ್‌ನ್ನು ಏನು ಎರಚಿಸಿಕೊಂಡ ಮಹಿಳೆ ಇರುತ್ತಾಳೆ ಅವಳು, ಸಂಪೂರ್ಣವಾಗಿ ಸತ್ತೇ ಹೋಗಿರುತ್ತಾಳೇನೋ ಎಂದು ನನ್ನ ಭಾವನೆ. ನಾನು ಪ್ರಶ್ನೆ ಮಾಡುತ್ತೇನೆ. ಈ ಆಸಿಡ್ ಏನಿದೆ ಅದು ಹಾದಿ ಬೀದಿಯಲ್ಲಿ ಬಕೆಟ್‌ಗಟ್ಟಲೇ ಸಿಗುತ್ತಿದೆಯೇ ಎಂದು ನಾನು ಕೇಳುತ್ತೇನೆ. ಏಕೆಂದರೆ ಇತ್ತೀಚೆಗೆ ಇಂಥ ಪ್ರಕರಣಗಳು ಜಾಸ್ತಿಯಾಗುತ್ತಿದೆ. ತಾವು ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ಎಂದು ಹೇಳಿದ್ದೀರಿ. ವಿಚಾರಗಳೇನೋ ಸರಿ ಇದೆ. ಆದರೆ ಸರ್ಕಾರ ಇಂಥ ಪರಕರಣಗಳಲ್ಲಿ ಆ್ಯಸಿಡ್ ದಾಳಿಗೆ ತುತ್ತಾದವರಿಗೆ ತಾವು ಏನಾದರೂ ಸರ್ಕಾರದ ಆಸ್ಪತ್ರೆಗಳಲ್ಲಿ ಅಥವಾ ಇನ್ಯಾವುದೇ ಆಸ್ಪತ್ರೆಗಳಲ್ಲಿ ಅಡ್ಮಿಟ್ ಆದರೆ ಅವರಿಗೆ ಏನಾದರೂ ಪರಿಹಾರ ಸಿಗುತ್ತದೆಯೇ? ಎಷ್ಟು ಖರ್ಚಾಗುತ್ತದೆ. ಈ ರೀತಿಯ ಪ್ರಕರಣಗಳು ಇತ್ತೀಚೆಗೆ ಬಹಳ ಆಗುತ್ತಿರುವುದರಿಂದ ಸರ್ಕಾರ ಇದಕ್ಕೆ ತಕ್ಷಣ ಏನಾದರೂ ಪರಿಹಾರ ಕೊಡುವ ಕೆಲಸ ಆಗಬೇಕು ಎಂಬುದೇ ನನ್ನ ಮನವಿಯಾಗಿದೆ. ಇತ್ತೀಚೆಗೆ ಮೊನ್ನೆ ನಡೆದಂಥ ಘಟನೆಯಲ್ಲಿ ಹೇಮಲತಾ ಎನ್ನುವವರ ಮೇಲೆ ಆ್ಯಸಿಡ್ ದಾಳಿಗೆ ತುತ್ತಾದಾಗ ನಮ್ಮ ಸಹೋದರರು ಹೇಳುತ್ತಿದ್ದರು. ಅವರ

ಕ್ಷೇತ್ರದಲ್ಲಿಯೇ ಅವರು ಬರುವುದರಿಂದ, "ನಾನೂ ಕೂಡ ಪರಿಹಾರವನ್ನು ಅವರಿಗೆ ಕೊಡುತ್ತಿದ್ದೇನೆ. ಪರಿಸ್ಥಿತಿ ಅಷ್ಟು ಗಂಭೀರವಿದೆ" ಎಂದು ಹೇಳಿದಾಗ ನನಗೆ ಬಹಳ ನೋವಾಯಿತು. ನಾವು ಇವೊತ್ತಿನವರೆಗೂ ಭೇಟಿ ಕೊಡದೇ ಇರಲು ಇರುವ ಕಾರಣವನ್ನು ಕೂಡ ಕೇಳುತ್ತೇನೆ. ಏಕೆಂದರೆ ಸದನದ ಸದಸ್ಯರು ಅಲ್ಲಿಗೆ ಹೋದರೆ ಏನಾದರೂ ಒಂದು ಅವರಿಗೆ ಹೇಳಬೇಕಲ್ಲ. ಏನಾದರೂ ಒಂದು ಸಂದೇಶವನ್ನು ಕೊಡಬೇಕಲ್ಲ. ಸರ್ಕಾರ ಈ ದಿಕ್ಕಿನಲ್ಲಿ ಏನಾದರೂ ಮಾಡುತ್ತಿದೆ ಎಂದು ಅವರಿಗೆ ಹೇಳಬೇಕಲ್ಲ. ಆದುದರಿಂದ ಏನಾದರೂ ಅವರಿಗೆ ತಕ್ಷಣ ಪರಿಹಾರವನ್ನು ಕೊಡಬೇಕು. ಏಕೆಂದರೆ ಅವರ ನೊಂದ ಮನಸ್ಸಿಗೆ ತಕ್ಷಣ ಹಣದ ಅವಶ್ಯಕತೆ ಇರುತ್ತದೆ. ಇದನ್ನು ಬಾಯಿ ಬಿಟ್ಟು ಹೇಳಬೇಕಾದಂಥ ಅವಶ್ಯಕತೆ ಇಲ್ಲ. ಹೀಗಾಗಿ ಅವರಿಗೆ ಔಷದೋಪಚಾರಕ್ಕಾಗಿ ಏನು ಖರ್ಚು ಬೇಕಾಗುತ್ತದೆ. ಈ ಬಗ್ಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಬೇಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ನಾನು ಉತ್ತರವನ್ನು ಕೊಡಬೇಕಾದರೆ ಕೊನೆಯದಾಗಿ ಇದೇ ವಿಷಯವನ್ನೇ ಹೇಳಿದ್ದು. ಹೆಣ್ಣು ಮಕ್ಕಳಿಗೆ ಆಗತಕ್ಕಂಥ ಇಂಥ ತೊಂದರೆಗಳೇನಿದೆ, ಸರ್ಕಾರ ಆರ್ಥಿಕವಾಗಿ ಇವರಿಗೆ ಆದಷ್ಟು ಏನೊಂದು ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಸಾಧ್ಯ ಇದೆ, ಅವುಗಳನ್ನು ಮಾಡುತ್ತದೆ. ಇಂಥ ಆ್ಯಸಿಡ್ ಪ್ರಕರಣಗಳಲ್ಲಿ ಹಣ ಎಷ್ಟು ಖರ್ಚು ಆಗುತ್ತದೆ ಎನ್ನುವುದರ ಬಗ್ಗೆ ನಮ್ಮ ಗಮನದಲ್ಲೂ ಇದೆ. ಏಕೆಂದರೆ ಕುಟುಂಬದಲ್ಲೇ ಆ ಒಂದು ಸಮಸ್ಯೆಯನ್ನು ಎದುರಿಸಿದ್ದೇವೆ. ಇವೊತ್ತು ಅಂಥ ಒಂದು ಪ್ರಕರಣ ಏನು ನಡೆದಿದೆ, ಇವೊತ್ತು ಹೆಣ್ಣು ಮಕ್ಕಳಿಗೆ ಇಂಥ ಒಂದು ಘಟನೆಗಳಿಂದ ಅವರು ಬೀದಿಗೆ ಬರತಕ್ಕಂಥ ಒಂದು ವಾತಾವರಣ ಏನಿದೆ, ಆ ಒಂದು ದೃಷ್ಟಿಯಿಂದಲೇ ನಾನು ಆದಷ್ಟು ಬೇಗ ಇಂಥ ಪ್ರಕರಣಗಳಿಗೆ ಸರ್ಕಾರದಿಂದ ನೆರವು ಕೊಡತಕ್ಕಂಥದ್ದಕ್ಕೆ ಒಂದು ನೀತಿಯನ್ನು ತರುತ್ತೇವೆ.

ಶ್ರೀಮತಿ ಸುನೀತಾ ವೀರಪ್ಪಗೌಡ : ಮಾನ್ಯ ಅಧ್ಯಕ್ಷರೆ, ಮಾಡಿದಂತಹವರಿಗೆ ಶಿಕ್ಷೆ ಏನಾಗಿದೆ?

ಅಧ್ಯಕ್ಷರು : ಈಗ ಚರ್ಚೆ ಮಾಡುವುದಕ್ಕೆ ಹೋದರೆ ಬಹಳಷ್ಟು ಸಮಯವಾಗುತ್ತದೆ.

ಶ್ರೀಮತಿ ಎಂ.ಕೆ. ನಾಗಮಣಿ : ಮಾನ್ಯ ಅಧ್ಯಕ್ಷರೆ, ಈ ಪ್ರಕರಣದಲ್ಲಿ ಆರೋಪಿಗಳು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬಾರದು. ಕಾನೂನಿನ ಪ್ರಕಾರ ಅವರಿಗೆ ಶಿಕ್ಷೆಯಾಗಬೇಕು.

ಅಧ್ಯಕ್ಷರು : ನಿಮ್ಮ ಎಲ್ಲಾ ಹೆಣ್ಣು ಮಕ್ಕಳ ಪರವಾಗಿ ಅವರು ಮಾತನಾಡಿದ್ದಾರೆ. ಇನ್ನು ಕೆಲವು ವಿಚಾರಗಳು ಇವೆ. ಆದುದರಿಂದ ಇನ್ನು ಕೆಲವರಿಗೆ ಅವಕಾಶವನ್ನು ಕೊಡಬೇಕು.

ಶ್ರೀಮತಿ ಸುನೀತಾ ವೀರಪ್ಪಗೌಡ : ಮಾನ್ಯ ಅಧ್ಯಕ್ಷರೆ, ಎಷ್ಟೋ ಪ್ರಕರಣಗಳು ಇದೇ ರೀತಿಯಾಗಿವೆ. ಅನಾದಿ ಕಾಲದಿಂದಲೂ ಮತ್ತು ಈಗಲೂ ಕೂಡ ದೌರ್ಜನ್ಯ

ನಡೆಯುತ್ತಿದೆ. ಇಂತಹ ಒಂದು ಕಂಪ್ಯೂಟರ್ ಯುಗದಲ್ಲೂ ಕೂಡ ಈ ರೀತಿ ನಡೆಯುತ್ತಿರಬೇಕಾದರೆ, ಇದುವರೆಗೆ ಆಗಿರುವಂತಹ ಪ್ರಕರಣದಲ್ಲಿ ಇದರಲ್ಲಿ ಎಷ್ಟು ಆರೋಪಿಗಳಿಗೆ ಏನು ಶಿಕ್ಷೆಯಾಗಿದೆ? ಎಂದು ಸರ್ಕಾರ ಹೇಳಬೇಕು.

ಅಧ್ಯಕ್ಷರು : ಎಲ್ಲರ ಪರವಾಗಿ ಈಗಾಗಲೆ ಸದಸ್ಯರು ಮಾತನಾಡಿದ್ದಾರಲ್ಲ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಈ ಘಟನೆ ನಡೆದದ್ದು ನನ್ನ ಕ್ಷೇತ್ರದಲ್ಲಿ. ನಾನು ಆಸ್ಪತ್ರೆಗೆ ಹೋಗಿ ಆ ಹೆಣ್ಣು ಮಗಳನ್ನು ನೋಡಿಕೊಂಡು ಬಂದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇಂತಹ ಘಟನೆಗಳು ಆದಾಗ ಅವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಬೇಕಾಗುತ್ತದೆ. ಆ ಪ್ಲಾಸ್ಟಿಕ್ ಸರ್ಜರಿಯನ್ನು ಸರ್ಕಾರದಿಂದ ನಾವು ಮಾಡುತ್ತೇವೆಂದು ಹೇಳಿದರು. ಇನ್ನು ಎರಡನೆಯದಾಗಿ ಹೇಳುವುದಾದರೆ, ನಾನು ಆಸ್ಪತ್ರೆಗೆ ಹೋಗಿದ್ದೆ, ತಾವು ಅಲ್ಲಿಗೆ ದಯವಿಟ್ಟು ಒಂದೈದು ನಿಮಿಷ ಹೋಗಿ ಬನ್ನಿ ಇಲ್ಲವೆಂದರೆ ಮಾನ್ಯ ಮುಖ್ಯಮಂತ್ರಿಗಳಾದರೂ ಒಂದೈದು ನಿಮಿಷ ಹೋಗಿ ಬರಲಿ. ಅಲ್ಲಿ 65 ಪೇಷಂಟ್ಸ್‌ಗೆದ ಒಬ್ಬರು ನರ್ಸ್ ಇದ್ದಾರೆ. ಅಲ್ಲಿ ನೋಡುವುದಕ್ಕಾಗುತ್ತಿಲ್ಲ. ಇನ್ನು ಮೂರನೆಯದಾಗಿ ಆ್ಯಸಿಡ್ ಸುಲಭವಾಗಿ ಜನರಿಗೆ ಸಿಗಬಾರದು. ರಾಜಾ ಮಾರ್ಕೆಟ್‌ಗೆ ಹೋಗುತ್ತಾರೆ. ಇನ್ನೊಂದು ಕಡೆ ಹೋಗುತ್ತಾರೆ, ತೆಗೆದುಕೊಳ್ಳುತ್ತಾರೆ. ನನ್ನ ಸಿಸ್ಟರ್ ಹೇಳಿದರು. ಈಗ ಆ್ಯಸಿಡ್ ಬಕೆಟ್ ಬಕೆಟ್‌ನಲ್ಲಿ ಮಾರ್ಕೆಟ್‌ನಲ್ಲಿ ಸಿಗುತ್ತಿದೆ ಎಂದು. Acid should not be easily available. ಯಾರಾದರೂ ಆ್ಯಸಿಡ್ ಪರ್ಚೇಸ್ ಮಾಡುವುದಕ್ಕೆ ಹೋದರೆ ಅವನಿಗೆ ಅದು ಸುಲಭವಾಗಿ ಸಿಗಬಾರದು. ಈ ಬಗ್ಗೆ ಸರ್ಕಾರ ಏನಾದರೂ ಮಾಡಬೇಕು.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲೆ ನೋಡಿ, ನೀವು ಗಂಡಸರಿಗೆ ಕೊಟ್ಟಷ್ಟು ಅವಕಾಶ ನಮಗೆ ಕೊಡುತ್ತಿಲ್ಲ. ಗಂಡಸರಿಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಆದರೆ ನಮಗೆ ಎರಡು ನಿಮಿಷ ಕೂಡ ಅವಕಾಶ ಕೊಡುವುದಿಲ್ಲ. ಇಲ್ಲೆ ನಮಗೆ ಅವಕಾಶ ಕೊಡದೆ ಇರುವಾಗ, ಇನ್ನು ಹೊರಗಡೆ ನಮಗೆ ರಕ್ಷಣೆ ಎಲ್ಲಿದೆ? ನಮ್ಮ ಸರ್ಕಾರ ಬಂದ ಮೇಲೆ ಹೆಣ್ಣು ಮಕ್ಕಳಿಗೆ ಒಳ್ಳೆಯ ರಕ್ಷಣೆ ಸಿಗುವ ಹಾಗೆ ಮಾಡಬೇಕು.

ಅಧ್ಯಕ್ಷರು : ಆಯಿತು ಮಾತನಾಡಿ. ನಿಮ್ಮ ಸಲಹೆಯನ್ನು ಕೊಡಿ.

ಶ್ರೀಮತಿ ಎಂ.ಕೆ. ನಾಗಮಣಿ : ಅದರ ಜೊತೆಗೆ ಎಷ್ಟು ಜನ ಆರೋಪಿಗಳಿಗೆ ಇದರಲ್ಲಿ ಶಿಕ್ಷೆಯಾಗಿದೆ ಎನ್ನುವುದನ್ನು ಕೂಡ ತಿಳಿಸಬೇಕು.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಮೈಸೂರಿಗೆ ಒಂದು ಬಾರಿ ಹೋಗಿದ್ದೆವು. ಒಂದು ಹೆಂಗಸು ಬುರ್ಖಾ ಹಾಕಿಕೊಂಡು ಬಂದಿದ್ದು, ಅವಳ ಮುಖವನ್ನೆ ತೋರಿಸುತ್ತಿರಲಿಲ್ಲ. ಆಗ ಪೋಲೀಸ್‌ನವರು ಒಳಗಡೆ ಬಿಡುತ್ತಿರಲಿಲ್ಲ. ಏಕೆ ಅವಳನ್ನು ಪೊಲೀಸ್‌ನವರು ಬಿಡುತ್ತಿರಲಿಲ್ಲವೆಂದರೆ ಅವಳು ಬಾಂಬ್ ಏನೋ

ಇಟ್ಟುಕೊಂಡು ಬಿಟ್ಟಿದ್ದಾಳೆ ಎಂದು ಅನುಮಾನದಿಂದ ಆ ರೀತಿ ಮಾಡಿದರು. ನಂತರ ಅವಳ ಮುಖದ ಮೇಲಿನ ಪರದೆಯನ್ನು ತೆಗೆದು ನೋಡಿದಾಗ, ಅವಳ ಮುಖಕ್ಕೆ ಆ್ಯಸಿಡ್ ಎರಚಿದ್ದು, ಅದನ್ನು ನೋಡುವುದಕ್ಕೆ ಆಗುತ್ತಿರಲಿಲ್ಲ. ಏಕೆಂದರೆ ಅವಳ ಮೂಗು, ಬಾಯಿ, ಕಣ್ಣು ಎಲ್ಲೆಲ್ಲಿದೆಯೋ ಎನ್ನುವ ರೀತಿಯಲ್ಲಿ ಇತ್ತು. ಅಷ್ಟೊಂದು ಹೀನಸ್ಥಿತಿಯಲ್ಲಿರುವಾಗ, ಅಂತಹ ಹೆಣ್ಣು ಮಕ್ಕಳಿಗೆ ಮೊಟ್ಟ ಮೊದಲನೆಯದಾಗಿ ಪ್ಲಾಸ್ಟಿಕ್ ಸರ್ಜರಿ ನಡೆಸುವುದಕ್ಕೆ ಆದ್ಯತೆಯನ್ನು ಕೊಡಬೇಕು. ನಂತರ ಅವರಿಗೆ ಫ್ರೀ ಆಗಿ ಟ್ರೀಟ್‌ಮೆಂಟ್ ಕೂಡ ಮಾಡಿಸಿ, ಅವರಿಗೆ ಆರ್ಥಿಕವಾಗಿ ಅನುಕೂಲವನ್ನು ಮಾಡಿಕೊಡಬೇಕು. ಗಂಡಸರೆಲ್ಲಾ ಹೋಗಿ ಮುಖಕ್ಕೆ ಆ್ಯಸಿಡ್ ಎರಚಿರುತ್ತಾರೆ. ಆದುದರಿಂದ ಅಂತಹವರಿಗೆ ಎಲ್ಲಾ ರೀತಿಯಲ್ಲಿ ಅನುಕೂಲವನ್ನು ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರಿಗೆ ಹೇಳಿದ್ದು ಮೊದಲು ಟ್ರೀಟ್‌ಮೆಂಟ್ ಕೊಟ್ಟು ಆಮೇಲೆ ಪ್ಲಾಸ್ಟಿಕ್ ಸರ್ಜರಿ ಮಾಡಬೆಕೆಂದು. ಆದರೆ ಅವರು ಮೊದಲು ಪ್ಲಾಸ್ಟಿಕ್ ಸರ್ಜರಿ ಮಾಡಿ, ಆಮೇಲೆ ಟ್ರೀಟ್‌ಮೆಂಟ್ ಕೊಡಬೇಕೆಂದು ಹೇಳಿದರು.

ಅಧ್ಯಕ್ಷರು : ಎಲ್ಲರಿಗೂ ಕೂಡ ತಂಗಿನೋ, ಅಮ್ಮನೋ, ಅಕ್ಕನೋ ಈ ರೀತಿ ಹೆಣ್ಣು ಮಕ್ಕಳು ಮನೆಯಲ್ಲಿ ಇದ್ದಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಅದಕ್ಕೆ ಸದಸ್ಯರೆಲ್ಲರೂ ಪೂರ್ಣವಾದ ಸಹಮತ ಇದೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ನಾನು ಇದಕ್ಕೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ನಾವು ಯಶಸ್ವಿನಿ ಯೋಜನೆಯಲ್ಲಿ ಆರ್ಥಿಕ ಸಹಾಯವನ್ನು ಕೊಡುತ್ತಿದ್ದೇವೆ. ಇಂತಹ ದೌರ್ಜನ್ಯವಾಗಿರುವಂತಹ ಹೆಣ್ಣುಮಕ್ಕಳು ಏನಿದ್ದಾರೆ, ಅಂತಹವರು ಮೆಂಬರ್ ಕೂಡ ಅದರಲ್ಲಿ ಆಗಿರುವುದಿಲ್ಲ. ಆಗ ಕಾನೂನು ಅಡ್ಡ ಬರುತ್ತದೆ. ಇಂತಹ ಪ್ರಕರಣದಲ್ಲಿ 'ಆಸಿಡ್ ದಾಳಿಗೆ' ಒಳಗಾದಂತಹ ಹೆಣ್ಣು ಮಕ್ಕಳಿಗೆ ಪ್ಲಾಸ್ಟಿಕ್ ಸರ್ಜರಿ ಮಾಡುವುದಕ್ಕೆ ಒಂದು ಜಿ.ಓ. ಮಾಡಿ ಅದರಲ್ಲಿ ಅವಕಾಶ ಮಾಡಿಕೊಟ್ಟರೆ, ತಕ್ಷಣ ಸರ್ಕಾರದವರು ದುಡ್ಡು ಕೊಡದೇ ಇದ್ದರೂ ಕೂಡ ಕೆಲಸ ನಡೆದುಕೊಂಡು ಹೋಗುತ್ತದೆ. ಅದರಿಂದ ಅವರಿಗೂ ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಒಂದು ಜಿ.ಓ. ಇಶ್ಯೂ ಮಾಡಬೇಕು. ಮತ್ತು ಇಂತಹ ದೌರ್ಜನ್ಯಕ್ಕೆ ಒಳಗಾದಂತಹ ಹೆಣ್ಣು ಮಕ್ಕಳು ಯಶಸ್ವಿನಿ ಯೋಜನೆಯಡಿ ಬರುವಂತಹ ರೀತಿಯಲ್ಲಿ ಸೌಲಭ್ಯವನ್ನು ಕಲ್ಪಿಸಿ ಆಮೇಲೆ ನಿಮ್ಮ ಪ್ರೊಸಿಜರ್ ಏನಿದೆ ಅದನ್ನು ಮಾಡಿಕೊಳ್ಳಬೇಕು.

ಅಧ್ಯಕ್ಷರು : ಈಗ ಎಲ್ಲರೂ ಕೂಡ ಆರ್ಥಿಕ ನೆರವಿನ ಬಗ್ಗೆ ಹೇಳಿದಿರಿ. ಆದರೆ ಇದನ್ನು ಪ್ರಿವೆನ್‌ಷನ್ ಯಾವ ರೀತಿ ಮಾಡಬೇಕೆಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಘಟನೆಗಳು ನಡೆಯದ ಹಾಗೆ ಪ್ರಿವೆನ್‌ಷನ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಮೊದಲು ಮಾಡಬೇಕು. ಇಲ್ಲದಿದ್ದರೆ ಆ್ಯಸಿಡ್‌ಗೆ ಪ್ರಕರಣಕ್ಕೆ ಒಳಗಾಗಿರುವಂತಹ ವ್ಯಕ್ತಿಗಳಿಗೆ ಪರಿಹಾರ ಕೊಡುತ್ತೇವೆಂದರೆ ಆ್ಯಸಿಡ್ ಹಾಕುವುದು ಇನ್ನು ಜಾಸ್ತಿಯಾಗುತ್ತದೆ. ಆ್ಯಸಿಡ್ ಹಾಕದ ಹಾಗೆ ಮಾಡಬೇಕೆಂದರೆ ಏನು ಮಾಡಬೇಕು? ಮಾನ್ಯ ರೋಷನ್ ಬೇಗ್‌ರವರು ಒಂದು ಸಲಹೆಯನ್ನು ಕೊಟ್ಟರು. ಆ್ಯಸಿಡ್ ಅನ್ನು ಎಲ್ಲೆಂದರಲ್ಲಿ ಸುಲಭವಾಗಿ ಸಿಗುವಂತೆ ಲೈಸೆನ್ಸ್ ಇಲ್ಲದೆ ಕಾರಣವಿಲ್ಲದೆ ಕೊಂಡು ಕೊಳ್ಳುವುದಕ್ಕೆ ಅವಕಾಶ ಕೊಡಬಾರದು ಎಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಅದನ್ನು ತಡೆಗಟ್ಟಬೇಕಾದರೆ ಬೇರೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊದಲನೆಯದಾಗಿ ಅದನ್ನು ತಡೆಗಟ್ಟುವುದಕ್ಕೆ ನೋಡಬೇಕೇ ಹೊರತು ಆ್ಯಸಿಡ್ ಹಾಕಿದ ಮೇಲೆ ಅಂತಹ ಪ್ರಕರಣಕ್ಕೆ ಪರಿಹಾರ ಕೊಡುತ್ತೇವೆ ಎಂದಲ್ಲ ನಾವು ಆಲೋಚನೆ ಮಾಡಬೇಕಾಗಿರುವುದು. ಮಹಿಳೆಯರ ಮೇಲೆ ನಡೆಯುತ್ತಿರುವಂತಹ ದೌರ್ಜನ್ಯವನ್ನು ನಿಲ್ಲಿಸುವುದಕ್ಕೆ ವಿಶೇಷವಾದಂತಹ ಕಾರ್ಯಪಡೆಯನ್ನು ಮಾಡಿ ರಕ್ಷಣೆ ಮಾಡುವುದಕ್ಕೆ ಪೊಲೀಸರು ಕ್ರಮ ತೆಗೆದುಕೊಳ್ಳಬೇಕು. ಮತ್ತು ಎಲ್ಲಾ ಪ್ರದೇಶಗಳಲ್ಲಿ ಆ ರೀತಿ ಕಾರ್ಯಪಡೆ ಮಾಡಿದರೆ ಆಸಿಡ್ ದಾಳಿಯನ್ನು ಪ್ರಿವೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಕಾರ್ಯಪಡೆ ಮಾಡಿ ರಕ್ಷಣೆ ಮಾಡುವುದಲ್ಲ, ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ತಂದು ಅವರಿಗೆ ಸರಿಯಾದಂತಹ ಶಿಕ್ಷೆಯಾಗಬೇಕು. ಇರಾನ್ ಹಾಗೂ ಇರಾಕ್‌ನಲ್ಲಿ ಮಾಡುತ್ತಾರಲ್ಲ, ಕೈ ಕತ್ತರಿಸುವುದು, ಆ ರೀತಿಯ ಶಿಕ್ಷೆಯಾದರೆ ಜನ ಹೆದರಿಕೊಳ್ಳುತ್ತಾರೆ. ಬೇರೆ ಇನ್ನೇನು ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಬಾಲಕೃಷ್ಣರವರೆ, ಆ ತರಹ ಮಾಡಿದರೆ ಏನಾಗುತ್ತದೆ ಎಂದರೆ ಅರಬ್ ದೇಶಗಳಲ್ಲಿ ಕೈ ಕತ್ತರಿಸುವುದು ಎಂದು ಇದೆಯಲ್ಲ. ಆ ರೀತಿ ಆ್ಯಸಿಡ್ ಹಾಕಿದರೆ ಅವರಿಗೂ ಆ್ಯಸಿಡ್ ಹಾಕಿಬಿಡುವುದು. ಆಗ ಸರಿಯಾಗಿ ಬಿಡುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ್ಯಸಿಡ್ ಮಾಡುವುದನ್ನು ನೀವು ಮೆಡಿಕಲ್ ಸ್ಟೋರ್‌ಗೆ ಅಥಾರೈಸ್ ಮಾಡಿದರೆ ಅವರು scheduleless ಡ್ರಗ್ಸ್ ಎಂದು ಮಾರುತ್ತಾರೆ. ಇವತ್ತು ಏನಾಗುತ್ತಿದೆ ಎಂದರೆ ಕಾಮನ್ ಶಾಪ್‌ನಲ್ಲಿ ಆಸಿಡ್ ಸಿಗುತ್ತಿದೆ. ಎಕ್ಸ್‌ಕ್ಲುಸಿವ್ ಮೆಡಿಕಲ್ ಸ್ಟೋರ್‌ಗೆ ಒಂದು ಲೈಸೆನ್ಸ್ ಕೊಟ್ಟು ಅವರಿಗೆ ಮಾತ್ರ ಅಥಾರೈಸೇಷನ್ ಕೊಡಿ. ಅದನ್ನು ಕೂಡ ಅವರು ಕ್ವಾಂಟಿಟಿ ಮೇಲೆ ಮಾರುತ್ತಾರೆ. ಎಲ್ಲಿಯೂ ಕೂಡ ಲೀಟರ್‌ಗಟ್ಟಲೆ ಮಾರುವಂತಹ ಅವಶ್ಯಕತೆ ಕೂಡ ಇಲ್ಲ. 100 ಎಂ.ಎಲ್. ಯಾವುದೇ ಪರ್ಪಸ್‌ಗೆ ಬೇಕಾದರೆ ಅವರಿಗೆ ಕೊಡುವುದಕ್ಕೆ ಅವಕಾಶವನ್ನು ತಾವು ಕಾನೂನಿನಲ್ಲಿ ತಂದರೆ ಒಳ್ಳೆಯದು. Exclusive Medical Stores ಗೆ ಮಾತ್ರ

ಸರ್ವಿಸ್ ಕೂಡ ಇಲ್ಲ. ಇದು ಒಂದೇ ರಸ್ತೆಯಾಗಿದ್ದು, ಅನಾಹುತಗಳು ಆಗುವಂಥಾದ್ದನ್ನು ಗಮನದಲ್ಲಿಟ್ಟು ಕೊಂಡು, ಇದನ್ನು ಎಷ್ಟು ತೀವ್ರವಾಗಿ, ಎಷ್ಟು ನಿರ್ದಿಷ್ಟ ಕಾಲಾವಧಿಯಲ್ಲಿ ತಾವು ಮಾಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಕೇಂದ್ರ ಭೂ ಸಾರಿಗೆ ಸಚಿವರೊಡನೆ ಹಿಂದಿನ ಸರ್ಕಾರವೂ ಈ ಒಂದು ರಸ್ತೆಯನ್ನು ಆದ್ಯತೆಯ ಮೇಲೆ ತೆಗೆದುಕ್ಕೊಳ್ಳಬೇಕೆಂದು ಗಮನವನ್ನು ಸೆಳೆದಿದ್ದರು. ಮತ್ತೆ ಹಲವಾರು ಬಾರಿ ಚರ್ಚೆ ಆಗಿದೆ. ಈ ಹೊಸ ಸರ್ಕಾರ ಬಂದ ನಂತರವೂ, ನಾನು ಕೇಂದ್ರ ಭೂ ಸಾರಿಗೆ ಸಚಿವರನ್ನು ಭೇಟಿ ಮಾಡಿ, ಈ ರಸ್ತೆಯ ವಾಹನಗಳ ಒತ್ತಡದ ಬಗ್ಗೆ ವಿವರವಾಗಿ ಚರ್ಚೆಯನ್ನು ಮಾಡಿ, ಇವತ್ತು ಇದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು–ಹಾಸನ ಆಯಿತು, ಕೋಲಾರದ್ದು ಮಿನಿಸ್ಟರ್‌ರವರು ಘೋಷಣೆ ಮಾಡಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವರ್ಷವೇ ಈ ಒಂದು ಕೆಲಸಕ್ಕೂ ಚಾಲನೆ ಕೊಡಲು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಉತ್ತರ ಕರ್ನಾಟಕದಲ್ಲಿ ಇದು ಏಕೈಕ ರಸ್ತೆಯಾಗಿದೆ. ತಾವು ಬೆಂಗಳೂರು–ಹಾಸನ, ಕೋಲಾರ–ಬೆಂಗಳೂರು, ಹಿಡಿದುಕೊಂಡು ಹೋಗುವುದಕ್ಕಿಂತ, ಆ ಕಡೆಗೂ ತಾವು ಲಕ್ಷ್ಯವನ್ನು ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಆದಷ್ಟು ಬೇಗ ಎಂದು ನಾನು ಹೇಳುತ್ತಿದ್ದೇನೆ. ಈ ವರ್ಷವೇ ಇದರ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ವಿಷಯ: ಚಿಂಚೋಳಿ ತಾಲ್ಲೂಕಿನಲ್ಲಿ ಮಕ್ಕಳ ಮಾರಾಟ ನಡೆಸುತ್ತಿರುವ ಬಗ್ಗೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಚಿಂಚೋಳಿ ತಾಲ್ಲೂಕಿನಲ್ಲಿ ಕಳೆದ 4–5 ವರ್ಷಗಳ ಹಿಂದೆ ಮಕ್ಕಳ ಮಾರಾಟ ಆಗಿರುವ ವಿಚಾರ ಇಡೀ ನ್ಯಾಷನಲ್ ಪ್ರೆಸ್‌ನಲ್ಲಿ ಬಂತು, ಎಲ್ಲಾ ಕಡೆಗಳಲ್ಲೂ ಬಂತು. ಆದರೆ ಇತ್ತೀಚೆಗೂ ಇಂತಹ ಘಟನೆಗಳು ಆಗುತ್ತಿವೆಯೆಂದು ಕೆಲವು ಪತ್ರಿಕೆಗಳಲ್ಲೂ, ಟಿ.ವಿ. ಯಲ್ಲೂ ಹೇಳಿದರು. ಆಂಧ್ರಪ್ರದೇಶಕ್ಕೆ ಕರೆದುಕೊಂಡು ಹೋಗಿ ಮಾರಾಟ ಮಾಡುತ್ತಾರಂತೆ. ಹಿಂದೆ ಕೂಡ ನೂರಾರು ಮಕ್ಕಳನ್ನು ಮಾರಾಟ ಮಾಡಲ್ಪಟ್ಟಿತ್ತು. ಅದರ ಬಗ್ಗೆಯೂ ಕೂಡ ಇವತ್ತಿನವರೆಗೂ ಯಾವುದೇ ರಿಪೋರ್ಟ್ ಇಲ್ಲ. ಆ ಮಕ್ಕಳನ್ನು ಎಲ್ಲಿ ಮಾರಿದರು, ಎಲ್ಲಿ ಇದ್ದಾರೆ? ಈ ದೇಶದಲ್ಲಿ ಇದ್ದಾರ? ಅಥವಾ ಪರದೇಶದಲ್ಲಿ ಇದ್ದಾರ? ಅವರ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಒಂದು ವರ್ಷದ ಹಿಂದೆ ಕೇಳಿದಾಗ ಎನ್‌ಕ್ವಾಯರಿ ನಡೆಯುತ್ತಿದೆಂದು ಉತ್ತರ ಬಂತು. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಮಾಡಬೇಕೆಂದು ತಕ್ಷಣವೆ ಸ್ಪಂದಿಸಿ ಈಗಾಗಲೆ ಸೂಚನೆ ಕೊಟ್ಟಿದ್ದಾರೆ. ನಾನು ಸಾಧ್ಯವಾದರೆ ಅಲ್ಲಿ ಹೋಗಿ ಬರುವುದಲ್ಲದೆ ಅಂತಹ ಕುಟುಂಬದ ಸಮಸ್ಯೆಗಳನ್ನು ನೋಡಿ ತೀರ್ಮಾನ ಮಾಡಿದ್ದೇನೆ. ಅದೇನೆಂದರೆ ಇಂತಹ ಒಂದು ಪ್ರಕರಣಕ್ಕೆ ಈಗಾಗಲೇ ಮುಖ್ಯಮಂತ್ರಿಗಳ ಪರಿಹಾರ ನಿಧಿ ಏನಿದೆ ಅದರ ಪ್ರಕಾರ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ನೆರವನ್ನು ಕೊಟ್ಟುಕೊಂಡು ಬಂದಿದ್ದಾರೆ, ಆ ನೆರವನ್ನು ತಕ್ಷಣವೆ ಕೊಡುವಂತಹ ಕೆಲಸವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಏನು ಗಮನವನ್ನು ಸೆಳೆದಿದ್ದೀರಿ, ಸರ್ಕಾರದಿಂದ ಇದಕ್ಕೆ ಕಾನೂನು ತರುವುದಕ್ಕೆ ಏನೂ ತೊಂದರೆಯಾಗುವುದಿಲ್ಲ ತರೋಣ. ಆ್ಯಸಿಡ್ ಏನು ಮಾರುತ್ತಾರೆ ಅದನ್ನು ಮೆಡಿಕಲ್ ಸ್ಟೋರ್‌ನಲ್ಲಿ ಮಾತ್ರ ಮಾರುವಂತೆ ಕಾನೂನಿನಲ್ಲಿ ತಿದ್ದುಪಡಿ ತರಬೇಕೆಂದು ಹೇಳಿದಿರಿ. ಮನೆ ಹಾಗೂ ಕಟ್ಟಡಗಳ ಕೆಲಸ ಮಾಡುವಂತಹ ಸಂದರ್ಭದಲ್ಲಿ ಆ್ಯಸಿಡ್ ಯೂಜ್ ಮಾಡುವಂತಹದ್ದು ಇದ್ದು, ಆ ಆ್ಯಸಿಡ್ ಯಾರು ತೆಗೆದುಕೊಂಡು ಹೋಗುತ್ತಾರೆಂದು ದಾಖಲಿಸಲು ಅಂಗಡಿಯವರಿಗೆ ಅಥಾರೈಸ್ ಮಾಡಿ ಕೊಟ್ಟರೆ ಅದರಿಂದ ಉಪಯೋಗವಾಗುವುದಿಲ್ಲ ಮತ್ತು ಅದರ ವಿವರಗಳು ಕೂಡ ಸಿಗುವುದಿಲ್ಲ. ಆದುದರಿಂದ ನಾವು ಹೆಣ್ಣು ಮಕ್ಕಳ ಮೇಲೆ ದಬ್ಬಾಳಿಕೆ ಮಾಡುವಂತಾದ್ದು ಏನಿದೆ ಅದಕ್ಕೆ ನಾವು ಸ್ವಪ್ರೇರಣೆಯಿಂದ ಅಂತಹ ಕೆಲಸಗಳನ್ನು ಮಾಡಬಾರದು ಎನ್ನುವ ಭಾವನೆ ಎಲ್ಲರಲ್ಲೂ ಬರಬೇಕು. ನಾವು ಕಾನೂನಿನ ಪ್ರಕಾರ ಏನು ಶಿಕ್ಷೆಯನ್ನು ಕೊಡಬೇಕೊ, ಅದನ್ನು ಕೊಡುವಂಥಾದ್ದಕ್ಕೆ ಇನ್ನು ಹೆಚ್ಚಿನ ಕಾನೂನನ್ನು ತರಬೇಕೆಂದರೆ ತರೋಣವೆಂದು ಹೇಳಬಯಸುತ್ತೇನೆ.

(ಊ) ವಿಷಯ: ಸೊಲ್ಲಾಪುರದಿಂದ ಚಿತ್ರದುರ್ಗದವರೆಗಿನ ರಾಷ್ಟ್ರೀಯ ಹೆದ್ದಾರಿ 13ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಬಿಜಾಪುರದಿಂದ ಚಿತ್ರದುರ್ಗದವರೆಗೆ ಇರುವಂತಹ ನ್ಯಾಷನಲ್ ಹೈವೇಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡಲು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛಿಸುತ್ತೇನೆ.

ಸೊಲ್ಲಾಪುರದಿಂದ ಚಿತ್ರದುರ್ಗದವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–13 ಎಂದು 1960ರಲ್ಲಿ ಹಾಗೂ ಚಿತ್ರದುರ್ಗದಿಂದ ಮಂಗಳೂರು ವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–13 ಮುಂದುವರೆದ ಭಾಗ ಎಂದು 1999 ರಲ್ಲಿ ಘೋಷಿಸಲಾಗಿದೆ. ಈ ಹೆದ್ದಾರಿಯ ಒಟ್ಟು ಉದ್ದ 715 ಕಿಮೀ ಇರುತ್ತದೆ.

ಸೊಲ್ಲಾಪುರದಿಂದ ಹೊಸಪೇಟೆಯವರೆಗೆ ಒಟ್ಟು 194 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ–13 ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಕರಡು ಯೋಜನಾ ವರದಿಯನ್ನು ತಯಾರಿಸುವ ಕೆಲಸವನ್ನು ಸಮಾಲೋಚಕರಿಗೆ (Consultants) ವಹಿಸಲಾಗಿದೆ. ಹಾಗೂ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ರಾಷ್ಟ್ರೀಯ